ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು

ಹಸಿರು ಕಾರ್ಡುಗಳ ವಿತರಣೆಯಲ್ಲಿ ಲೋಪದೋಷಗಳು

೪೧೫. ಶ್ರೀ ಎ. ಟಿ. ರಾಮಸ್ವಾಮಿ(ಅರಕಲಗೂಡು).—ಮಾನ್ಯ ಆಹಾರ ಮತ್ತು ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಸಿರು ಕಾರ್ಡು ವಿತರಣೆಯಲ್ಲಿ ಲೋಪದೋಷಗಳು ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದರೆ, ಈ ಲೋಪದೋಷಗಳನ್ನು ಸರಿಪಡಿಸಲು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಕೆ. ಜೆ. ಜಾರ್ಜ್ (ಆಹಾರ ಮತ್ತು ಸಾರಿಗೆ ರಾಜ್ಯ ಮಂತ್ರಿಗಳು).—

ಅ) ಹೌದು

ಆ) ಅನರ್ಹ ಕುಟುಂಬಗಳಿಗೆ ಹಸಿರು ಕಾರ್ಡುಗಳನ್ನು ರದ್ದುಪಡಿಸಲು ೧೯೮೯ರಲ್ಲಿಯೇ ಎಲ್ಲಾ ಜಿಲ್ಲಾ ಪರಿಷತ್ತುಗಳಿಗೆ ಸೂಚನೆ ನೀಡಲಾಗಿದೆ. ತತ್ಪರಿಣಾಮವಾಗಿ ದಿನಾಂಕ ೧-೪-೮೯ರಿಂದ ಜನವರಿ ೧೯೯೦ ರವರೆಗೆ ೩೨,೭೬೯ ಅನರ್ಹರಿಗೆ ನೀಡಲಾದ ಹಸಿರು ಪಡಿತರ ಚೀಟಿಗಳನ್ನು ರದ್ದುಪಡಿಸಿ ಬಿಟ್ಟು ಹೋಗಿದ್ದ ೧೨,೪೦೫ ಅರ್ಹ ಕುಟುಂಬಗಳಿಗೆ ಹಸಿರು ಪಡಿತರ ಚೀಟಿಗಳನ್ನು ನೀಡಲಾಗಿದೆ. ಅನರ್ಹರಿಗೆ ನೀಡಲಾದ ಹಸಿರು ಕಾರ್ಡುಗಳನ್ನು ನಿರಂತರವಾಗಿ ಪತ್ತೆ ಹಚ್ಚಲು ಮತ್ತು ಪತ್ತೆ ಹಚ್ಚಿದ ಹಸಿರು ಕಾರ್ಡುಗಳನ್ನು ರದ್ದು ಮಾಡುವ ಕಾರ್ಯವನ್ನು ಮತ್ತೆ ಮುಂದುವರಿಸುವಂತೆ ಎಲ್ಲಾ ಜಿಲ್ಲಾ ಪರಿಷತ್ತುಗಳಿಗೂ ಸೂಚನೆ ನೀಡಲಾಗಿದೆ.

ಶ್ರೀ ಎ. ಟಿ. ರಾಮಸ್ವಾಮಿ.—ಮಾನ್ಯ ಅಧ್ಯಕ್ಷರೇ ಹಸಿರು ಕಾರ್ಡುಗಳ ವಿತರಣೆಯಲ್ಲಿ ಲೋಪದೋಷಗಳು ಆಗಿದೆ ಎಂದು ಹೇಳಿದ್ದಾರೆ. ಹಿಂದಿನ ಸರ್ಕಾರದವರು ಸಹ ಇದೇ ರೀತಿ ಹೇಳುತ್ತಿದ್ದರು. ನಮ್ಮ ಸರ್ಕಾರದವರೂ ಕೂಡ ಅದನ್ನೇ ಹೇಳುತ್ತಿದ್ದಾರೆ. ಲೋಪದೋಷಗಳು ಆಗಿವೆ ಎನ್ನುವ ವಿಚಾರದಲ್ಲಿ ಎರಡು ಮಾತುಗಳಿಲ್ಲ ಎಂದು ನನ್ನ ಭಾವನೆ. ಆದರೆ ಕಡು ಬಡವರಿಗೆ ಹಸಿರು ಕಾರ್ಡುಗಳನ್ನು ಕೊಡುವಲ್ಲಿ ಲೋಪದೋಷಗಳು ಆಗಿರತಕ್ಕಂಥಾದ್ದನ್ನು ಸರಿಪಡಿಸುವುದಕ್ಕೆ ೧೯೮೯ನೇ ಇಸವಿಯಿಂದ ಇದುವರೆವಿಗೂ ಸಾಧ್ಯವಾಗಿಲ್ಲವೆಂದರೆ. ನಾನಾದರೂ ಅಂದುಕೊಳ್ಳುತ್ತೇನೆ, ಏನೆಂದರೆ ಬಡವರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸತಕ್ಕಂಥ ಉದ್ದೇಶವನ್ನು ನೆರವೇರಿಸಲು ಸಾಧ್ಯವಾಗಲಿಲ್ಲ ಎಂದೂ ಹಾಗೂ ಈ ಒಂದು ಲೋಪದೋಷಗಳನ್ನು ಇಲ್ಲಿಯವರೆಗೆ ಸರಿಪಡಿಸುವುದಕ್ಕೆ ಸಾಧ್ಯವಾಗಲಿಲ್ಲ ವೆಂದು ನಾವು ಒಪ್ಪಿಕೊಂಡಂತಾಗುತ್ತದೆ. ಇಲ್ಲಿ ಅನರ್ಹರಿಗೆ ನೀಡಲಾಗಿದ್ದ ೩೨,೭೬೯ ಹಸಿರು ಕಾರ್ಡುಗಳನ್ನು ರದ್ದುಪಡಿಸಿದ್ದೇವೆ ಮತ್ತು ಬಿಟ್ಟು ಹೋಗಿದ್ದ ೧೨,೪೦೫ ಅರ್ಹ ಕುಟುಂಬಗಳಿಗೆ ಹಸಿರು ಕಾರ್ಡುಗಳನ್ನು ವಿತರಣೆ ಮಾಡಿದ್ದೇವೆಂದು ಹೇಳಿದ್ದಾರೆ. ಹಾಗಿದ್ದರೆ ಹಾಸನ ಜಿಲ್ಲೆಯಲ್ಲಿ ಎಷ್ಟು ಹಸಿರು ಕಾರ್ಡುಗಳನ್ನು ಅನರ್ಹರಿಗೆ ಕೊಟ್ಟಿದ್ದನ್ನು ರದ್ದುಪಡಿಸಿದ್ದಾರೆ ಮತ್ತು ಅರ್ಹರಿಗೆ ಎಷ್ಟು ಹಸಿರು ಕಾರ್ಡುಗಳನ್ನು ಕೊಟ್ಟಿದ್ದಾರೆಂಬುದನ್ನು ತಿಳಿಸಬೇಕು. ಜೊತೆಗೆ ಈಗ ಆಗಿರತಕ್ಕಂಥ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಎಷ್ಟು ದಿವಸಗಳಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತೀರೆಂಬುದನ್ನು ತಿಳಿಸಬೇಕೆಂದು ತಮ್ಮ ಮೂಲಕ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೇ ಸುಮಾರು ೩೧ ಲಕ್ಷ,೪೨೫ ಗ್ರೀನ್ ಕಾರ್ಡ್‌ಗಳನ್ನು ನಾವು ಈಗಾಗಲೇ ಕೊಟ್ಟಿದ್ದೇವೆ. ಹಲವಾರು ಜಿಲ್ಲೆಗಳಿಂದ ದೂರು ಬಂದಿದೆ. ಅನರ್ಹರಿಗೆ ಕೊಟ್ಟಿದ್ದೇವೆ ಎಂದು. ಇದರ ಪ್ರಕಾರ ಸರ್ಕಾರದಿಂದ ಜಿಲ್ಲಾ ಪರಿಷತ್ತುಗಳಿಗೆ ಆದೇಶ ಕೊಟ್ಟಿದ್ದೇವೆ. ಎಲ್ಲೆಲ್ಲಿ ಅನರ್ಹರಿಗೆ ಕೊಟ್ಟಿದ್ದೀರಿ ಅದನ್ನು ತೆಗೆದು ಅರ್ಹರಿಗೆ ಮಾತ್ರ ಕೊಡಿ ಎಂದು ಆದೇಶ ನೀಡಿದ್ದೇವೆ. ಆದರೆ ಕೆಲವು ಜಿಲ್ಲಾ ಪರಿಷತ್ತುಗಳು ಈ ಕೆಲಸವನ್ನು ಚೆನ್ನಾಗಿ ಮಾಡಿವೆ. ಉದಾಹರಣೆಗೆ ಕೊಡಗು ಜಿಲ್ಲೆಯಲ್ಲಿ ಅದು ಸಣ್ಣ ಜಿಲ್ಲೆಯಾದರೂ ೫ ಸಾವಿರ ಕಾರ್ಡುಗಳನ್ನು ಪತ್ತೆ ಹಚ್ಚಿದ್ದಾರೆ. ಆದರೆ ಕೋಲಾರ ಜಿಲ್ಲೆಯಲ್ಲಿ ಒಂದೇ ಒಂದು ಕಾರ್ಡ್‌ನ್ನು ಜಿಲ್ಲಾ ಪರಿಷತ್ತಿನವರು ಪತ್ತೆಹಚ್ಚಲಿಲ್ಲ. ನಾವು ಪುನಃ ಆದೇಶ ಕೊಡುತ್ತೇವೆ. ಅನರ್ಹರಿಗೆ ಎಲ್ಲಿ ಕೊಟ್ಟಿದ್ದೀರಿ ಅದನ್ನು ಪತ್ತೆಹಚ್ಚಿ ಅರ್ಹರಿಗೆ ವಿತರಣೆ ಮಾಡಿ ಎಂಬ ಆದೇಶ ಕೊಡುತ್ತೇನೆ. ತಮಗೆ ಗೊತ್ತಿರುವ ಹಾಗೆ ೩೧ ಲಕ್ಷ ೮೫ ಸಾವಿರ ಅಂದರೆ ಶೇಕಡ ೫೪ರಷ್ಟು ಗ್ರಾಮೀಣ ಪ್ರದೇಶದ ಜನರು ಇದರೊಳಗೆ ಬರುತ್ತಾರೆ. ನಮ್ಮ ಸೆನ್ಸಸ್ ಪ್ರಕಾರ ಬಡತನದ ರೇಖೆಯ ಕೆಳಗೆ ಇರುವವರು ೫೦ ಪರ್ಸೆಂಟ್ ಮಾತ್ರ ಇದ್ದಾರೆ. ಆದುದರಿಂದ

ಬೋಗಸ್ ಕಾರ್ಡುಗಳನ್ನು ಪತ್ತೆಹಚ್ಚುವ ಕ್ರಮವನ್ನು ಕೈಗೊಳ್ಳುತ್ತೇವೆ. ಹಾಸನ ಜಿಲ್ಲೆಯ ಬಗ್ಗೆ ನಾವು ಪ್ರತ್ಯೇಕವಾಗಿ ಕೇಳಲಿಲ್ಲ. ಆದುದರಿಂದ ಮಾನ್ಯ ಸದಸ್ಯರಿಗೆ ಉತ್ತರವನ್ನು ತರಿಸಿಕೊಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಸಚಿವರು ಹೇಳಿದರು, ಏನೆಂದರೆ ಜಿಲ್ಲಾ ಪರಿಷತ್ತುಗಳಿಂದ ಏನು ಕಾರ್ಡ್ ವಿತರಣೆ ಆಗುತ್ತಿದೆ, ಅದು ಅರ್ಹರಿಗೆ ಸರಿಯಾಗಿ ತಲುಪಿಲ್ಲವೆಂದು ತಿಳಿದು ಬಂದಿದೆ ಎಂದು. ಹಾಗಿದ್ದಲ್ಲಿ ಜಿಲ್ಲಾ ಪರಿಷತ್ತು ಮಾಡುತ್ತಿರುವಂತ ಕಾರ್ಯಕ್ರಮದಲ್ಲಿ ಲೋಪದೋಷಗಳು ಕಂಡು ಬಂದಿರುವುದರಿಂದ ತಾವು ಈ ಅಧಿಕಾರವನ್ನು ಜಿಲ್ಲಾ ಪರಿಷತ್ತಿನಿಂದ ತೆಗೆದು ಮೊದಲು ಯಾವ ರೀತಿ ವಿತರಣೆಯಾಗುತ್ತಿತ್ತು, ಆ ರೀತಿಯಾಗಿ ಮಾಡುತ್ತೀರಾ ಹೇಗೆ ?

ಶ್ರೀ ಕೆ. ಜೆ. ಜಾರ್ಜ್.—ಈ ಅಧಿಕಾರವನ್ನು ಈಗ ನಾವು ಜಿಲ್ಲಾ ಪರಿಷತ್ತಿಗೆ ವಹಿಸಿಕೊಟ್ಟಿದ್ದೇವೆ. ಆದುದರಿಂದ ಈ ಸಂದರ್ಭದಲ್ಲಿ ಅದರ ವಿಚಾರದಲ್ಲಿ ಬೇರೆ ಏನೂ ಹೇಳುವುದಕ್ಕಾಗುವುದಿಲ್ಲ. ಆದರೆ ಮಾನ್ಯ ಸದಸ್ಯರ ಸಲಹೆಯನ್ನು ನಾವು ಪರಿಶೀಲನೆ ಮಾಡಿ ನಂತರ ಏನು ಕ್ರಮ ಕೈಗೊಳ್ಳುವುದಕ್ಕೆ ಸಾಧ್ಯವಾಗುತ್ತದೆಂದು ವಿಚಾರ ಮಾಡುತ್ತೇವೆ.

ಶ್ರೀ ಕೆ. ಪೆಚ್. ಹನುಮೇಗೌಡ.—ಹಸಿರು ಕಾರ್ಡ್ ವಿತರಣೆಯಲ್ಲಿ ಲೋಪದೋಷ ಆಗಿದೆ ಎಂದು ಒಪ್ಪಿಕೊಂಡಿದ್ದೀರಿ. ಲೋಪದೋಷ ಆಗುವುದಕ್ಕೆ ಯಾರು ಕಾರಣರೋ ಅವರ ಮೇಲೆ ಕ್ರಮ ತೆಗೆದುಕೊಳ್ಳದೆ ಹೋದರೆ ಮುಂದೆ ಅರ್ಹರಿಗೆ ಮಾತ್ರ ಹಸಿರು ಕಾರ್ಡ್ ಕೊಡುತ್ತೇವೆಂದು ಹೇಗೆ ಹೇಳುತ್ತೀರಿ ? ಹಿಂದೆ ವಿತರಣೆ ಮಾಡಿದಾಗ ಲೋಪದೋಷ ಇದೆ ಎಂದು ನೀವೇ ಒಪ್ಪಿಕೊಳ್ಳುತ್ತೀರಿ. ಅವರ ಮೇಲೆ ಯಾವುದೇ ಶಿಸ್ತಿನ ಕ್ರಮ ತೆಗೆದುಕೊಳ್ಳದಿದ್ದರೆ ಮುಂದೆ ಅರ್ಹರಿಗೆ ಕೊಡುತ್ತಾರೆಂದು ಯಾವ ರೀತಿ ಭರವಸೆ ಕೊಡುತ್ತೀರಿ ?

ಶ್ರೀ ಕೆ. ಜೆ. ಜಾರ್ಜ್.—ಇದು ಜಿಲ್ಲಾ ಪರಿಷತ್ತಿನ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತದೆ. ಆದ್ದರಿಂದ ಈ ಬಗ್ಗೆ ಕ್ರಮವನ್ನು ಅವರು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀಮತಿ ಮೋಟಮ್ಮ.—ಹಸಿರು ಕಾರ್ಡಿನದು ಇಡೀ ರಾಜ್ಯದಲ್ಲಿ ದೊಡ್ಡ ಸಮಸ್ಯೆಯಾಗಿದೆ. ಹಸಿರು ಕಾರ್ಡ್ ಇರುವ ಬಡವರು, ಹಸಿರು ಕಾರ್ಡ್ ಇಲ್ಲದ ಬಡವರು ಎಂದು ಎರಡು ತರಹ ಆಗಿದೆ. ಉಳಿದವರಿಗೂ ಹಸಿರು ಕಾರ್ಡ್ ಯಾವಾಗ ಕೊಡುತ್ತೀರಾ ಎಂಬುದೇ ನನ್ನ ಪ್ರಶ್ನೆ.

ಶ್ರೀ ಕೆ. ಜೆ. ಜಾರ್ಜ್.—ಇದಕ್ಕೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಯಾರು ಬಡತನ ರೇಖೆಯ ಕೆಳಗೆ ಇದ್ದಾರೆ. ಅದರಿಗೆ ಹಸಿರು ಕಾರ್ಡ್ ಒದಗಿಸುವುದಕ್ಕೆ ನಾವು ವ್ಯವಸ್ಥೆ ಮಾಡಿದ್ದೇವೆ. ಕೆಲವೊಂದು ಸಂದರ್ಭದಲ್ಲಿ ಅಂಥವರಿಗೆ ಸಿಗದಿದ್ದರೆ ಎಲ್ಲಿ ಅನರ್ಹರಿಗೆ ಕೊಟ್ಟಿದ್ದಾರೆ ಅಂಥದ್ದನ್ನು ಕ್ಯಾನ್ಸಲ್ ಮಾಡಿ ಅರ್ಹರಿಗೆ ಕೊಡುವುದಕ್ಕೆ ಈಗಾಗಲೇ ಆದೇಶ ಕೊಟ್ಟಿದ್ದೇವೆ.

ಶ್ರೀ ಹೆಚ್. ಏಕಾಂತಯ್ಯ.—ಇವತ್ತಿನ ದಿವಸ ಹಸಿರು ಕಾರ್ಡ್ ವಿತರಣೆಯಲ್ಲಿರತಕ್ಕ ಲೋಪ ದೋಷಗಳನ್ನು ನಿವಾರಣೆ ಮಾಡಿದ್ದೇವೆ ಮತ್ತು ಕೆಲವು ವರ್ಗಗಳನ್ನು ಕೈಬಿಟ್ಟಿದ್ದೇವೆ ಅಂದಿರಿ. ಅದು ಸುಮಾರು ೩೨ ಸಾವಿರ ಅಂದರೆ ಶೇಕಡ ಒಂದರಷ್ಟು ಮಾತ್ರ ತಪ್ಪಾಗಿತ್ತು ಎಂಬ ಭಾವನೆ ಬರುತ್ತದೆ. ಆದುದರಿಂದ ಹಿಂದೆ ಹಸಿರು ಕಾರ್ಡ್ ಕೊಡುವಾಗ ತಪ್ಪಾಗಿದೆ ಎಂಬ ಭಾವನೆ ಸರಿಯಲ್ಲ ಶೇಕಡ ಒಂದರಷ್ಟು ತಪ್ಪು ದೊಡ್ಡದಲ್ಲ. ಈಗ ಹೊಸದಾಗಿ ಕೊಟ್ಟಿರುವುದು ಬಹಳ ಕಡಿಮೆ. ಈ ಸಂಖ್ಯೆಯನ್ನು ಹೆಚ್ಚಿಸುವ ಆಲೋಚನೆ ಸರ್ಕಾರಕ್ಕೆ ಏನಾದರು ಇದೆಯೇ ಹೇಗೆ ?

೧೧–೩೦ ಎ. ಎಂ

ಶ್ರೀ ಕೆ.ಜೆ. ಜಾರ್ಜ್.—ಈ ೩೨ ಸಾವಿರ ಕಾರ್ಡ್‌ಗಳನ್ನು ಪತ್ತೆ ಹಚ್ಚಿದಾಗ ಸಂಪೂರ್ಣವಾಗಿ ಪತ್ತೆ ಹಚ್ಚಿದ್ದೇವೆ ಎಂದು ಹೇಳಲಿಲ್ಲ. ಮೊನ್ನೆ ಸಹ ಜಿಲ್ಲಾ ಪರಿಷತ್ತಿನ ಅಧ್ಯಕ್ಷರುಗಳು ಒಂದು ತಾವನ್ನು ಪಾಸ್ ಮಾಡಿ ಅನರ್ಹರಿಗೆ ಕೊಟ್ಟಿದ್ದಾರೆ, ಅದರಲ್ಲಿ ಇರೆಗ್ಯುಲಾರಿಟೀಸ್ ಆಗಿದೆ ಎಂದು ಹೇಳಿದ್ದಾರೆ. ಈ ವಿಚಾರದಲ್ಲಿ ಜಿಲ್ಲಾ ಪರಿಷತ್ತಿನವರು ಸಂಪೂರ್ಣವಾಗಿ ಕ್ರಮ ತೆಗೆದುಕೊಳ್ಳಬೇಕು, ಮತ್ತೆ ಎಲ್ಲೆಲ್ಲಿ ಅರ್ಹರಿಗೆ ಕೊಡಬೇಕೋ ಅಲ್ಲಿ ಕೊಡುವುದಕ್ಕೆ ಈಗಾಗಲೇ ಆದೇಶ ಕೊಡಲಾಗಿದೆ.

ಶ್ರೀ ಎಚ್.ಎಂ. ರೇವಣ್ಣ.—ಈಗ ಕೋಲಾರ ಜಿಲ್ಲೆಯಲ್ಲಿ ಅನರ್ಹರಿಗೆ ಹಸಿರು ಕಾರ್ಡ್ ಕೊಟ್ಟಿರುವ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಒಂದನ್ನೂ ಹಿಡಿದು ಕ್ರಮ ತೆಗೆದುಕೊಂಡಿಲ್ಲ ಎಂದು ಸಚಿವರು ಹೇಳಿದ್ದಾರೆ. ಇದರ ಬಗ್ಗೆ ಸರ್ಕಾರ ಏನಾದರು ಕ್ರಮ ತೆಗೆದುಕೊಳ್ಳುತ್ತದೆಯೆ ?

ಶ್ರೀ ಕೆ.ಜೆ. ಜಾರ್ಜ್.—ಅಧ್ಯಕ್ಷರೇ, ಈಗಾಗಲೇ ನಾನು ತಿಳಿಸಿದ್ದೇನೆ. ಜಿಲ್ಲಾ ಪರಿಷತ್ತಿನವರು ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಮಾನ್ಯ ಅಧ್ಯಕ್ಷರೆ, ನಮ್ಮ ಸಚಿವರು ಇದೇ ಉತ್ತರವನ್ನು ಬಹಳ ದಿವಸಗಳಿಂದ ಕೊಡುತ್ತಾ ಬಂದಿದ್ದಾರೆ. ಈಗ ನಾವು ಅವರನ್ನು ಕೇಳುವುದು ಇಷ್ಟೆ. ಜಿಲ್ಲಾ ಪರಿಷತ್ತಿನವರಿಗೆ ಸರಿಪಡಿಸುವುದಕ್ಕೆ ಡೈರೆಕ್ಷನ್ ಕೊಡಬೇಕು. ಮತ್ತು ಒಂದು ಟೈಮ್ ಫಿಕ್ಸ್ ಮಾಡಬೇಕು ಬಹಳ ದಿವಸ ಈ ವಿಚಾರವನ್ನು ಪ್ರೊಲಾಂಗ್ ಮಾಡಬಾರದು. ಇದನ್ನು ಇನ್ನು ಒಂದು ತಿಂಗಳಲ್ಲಿ ಸರಿ ಮಾಡುತ್ತೇವೆ ಅಥವಾ ೧೫ ದಿವಸದಲ್ಲಿ ಸರಿ ಮಾಡುತ್ತೇವೆ ಎಂದು ಹೇಳಿದರೆ ನಿಜವಾಗಿಯೂ ಅವರಿಂದ ಉಪಯೋಗವಾಗುತ್ತದೆ.

ಶ್ರೀ ಕೆ.ಜೆ. ಜಾರ್ಜ್.—ಅಧ್ಯಕ್ಷರೇ, ಮಾನ್ಯ ಸದಸ್ಯರ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಆದಷ್ಟು ಬೇಗ ಇದನ್ನು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ ಹಳ್ಳಿಗಳಲ್ಲಿ ೩೧ ಲಕ್ಷ ಜನರಿಗೆ ಹಸಿರು ಕಾರ್ಡ್‌ಗಳನ್ನು ವಿತರಣೆ ಆಗಿವೆ. ಇದರಲ್ಲಿ ಅನರ್ಹರಿಗೆ ಕೆಲವರಿಗೆ ಸಿಕ್ಕಿದೆ ಎಂಬುದು ನಿರ್ವಿವಾದವಾದ ವಿಚಾರ. ಇದು ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿಯೇ ಇದರ ಬಗ್ಗೆ ತಪಾಸಣೆ ಮಾಡಿ ಅರ್ಹರಿಗೆ ಮಾತ್ರ ಕೊಡಬೇಕು ಎಂದು ಎಲ್ಲಾ ಜಿಲ್ಲಾ ಪರಿಷತ್ತುಗಳಿಗೂ ೧೯೮೮ರಲ್ಲೇ ಆದೇಶ ಕೊಟ್ಟಿದ್ದೆವು. ಎಲ್ಲಾ ಹಳ್ಳಿಗಳಲ್ಲೂ ಐ.ಆರ್.ಡಿ.ಪಿ. ಬೆನಿಫಿಷರೀಸ್ ಎಂದು ಒಂದು ಲಿಸ್ಟ್ ಮಾಡಿದ್ದರು. ಹಸಿರು ಕಾರ್ಡ್ ಕೊಡುವಾಗ ಹೊಸದಾಗಿ ಗ್ರಾಮಸಭೆಗಳನ್ನು ಮಾಡಿ ಕಡುಬಡವರನ್ನು ಹುಡುಕಲಿಲ್ಲ. ಯಾರು ಯಾರು ಐ.ಆರ್.ಡಿ.ಪಿ ಬೆನಿಫಿಷರೀಸ್ ಇದ್ದಾರೆ, ಅವರಿಗೇ ಕೊಡಬೇಕೆಂದು ತೀರ್ಮಾನ ಮಾಡಿದ್ದರಿಂದ ಕೆಲವು ಅನರ್ಹರಿಗೂ ಸಿಕ್ಕಿದೆ. ಈಗ ಅರ್ಹರನ್ನು, ಅನರ್ಹರನ್ನು ಪತ್ತೆ ಮಾಡತಕ್ಕದ್ದು ಏನಿದೆ ಆ ಕೆಲಸವನ್ನು ಸರ್ಕಾರದವರು ಜಿಲ್ಲಾ ಪರಿಷತ್ತಿನ ಮೇಲೆ ಹಾಕಿ ನನ್ನ ಜವಾಬ್ದಾರಿಯನ್ನು ಕಳಚಿಕೊಳ್ಳುವುದು ಸುಲಭ. ಜಿಲ್ಲಾ ಪರಿಷತ್ತಿಗೆ ಇದನ್ನು ಪತ್ತೆ ಮಾಡುವುದು ಕಷ್ಟದ ಕೆಲಸ. ಈ ಬಗ್ಗೆ ನೀವು ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಬೇಕು. ಅನೇಕ ಜನ ಬಡವರಿಗೆ ಹಸಿರು ಕಾರ್ಡ್ ಸಿಕ್ಕಿಲ್ಲ. ನಮ್ಮ ಸರ್ಕಾರ ಬಂದಮೇಲೆ ಕೇಂದ್ರ ಸರ್ಕಾರದವರು ಹೆಚ್ಚು ಅಕ್ಕಿಯನ್ನು ಮತ್ತು ಗೋಧಿಯನ್ನು ಈಗ ಕಳುಹಿಸಿದ್ದಾರೆ. ನಿಮ್ಮ ಸರ್ಕಾರ ಬಂದಮೇಲೆ ಕಳಿದ ಮೂರು ತಿಂಗಳಲ್ಲಿ ಹೆಚ್ಚು ಅಕ್ಕಿ ಮತ್ತು ಗೋಧಿಯನ್ನು ಕಳುಹಿಸಿದ್ದಾರೆ. ಆದ್ದರಿಂದ ತಕ್ಷಣ ಅನರ್ಹರನ್ನು ಪತ್ತೆ ಮಾಡುವುದು ಒಂದು ಕೆಲಸ ಆದರ ಜೊತೆಗೆ ಯಾವ ಬಡವರಿಗೆ ಹಸಿರು ಕಾರ್ಡ್ ಸಿಕ್ಕಿಲ್ಲ ಅವರಿಗೆ ಕಾರ್ಡ್‌ಗಳನ್ನು ಕೊಡುವುದಕ್ಕೆ ಸಾಧ್ಯವೇ ಎಂಬುದನ್ನು ತಿಳಿಸಿ.

ಶ್ರೀ ಕೆ.ಜೆ. ಜಾರ್ಜ್.—ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ಉಪನಾಯಕರು ಅನರ್ಹರಿಗೆ ಕೊಟ್ಟ ಹಸಿರು ಕಾರ್ಡ್ ಪತ್ತೆ ಮಾಡುವ ವಿಚಾರದಲ್ಲಿ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ ಇದನ್ನು ಜಿಲ್ಲಾ ಪರಿಷತ್ತಿಗೆ ಬಿಟ್ಟರೆ ಸಾಲದು ಎಂದು ಹೇಳಿದ್ದಾರೆ. ಸರ್ಕಾರದ ವತಿಯಿಂದ ಇದನ್ನು ಪರಿಶೀಲನೆ ಮಾಡಿಸುತ್ತೇವೆ. ಆದಷ್ಟು ಬೇಗ ಸರ್ಕಾರದಿಂದ ಕ್ರಮ ತೆಗೆದುಕೊಳ್ಳುವುದಕ್ಕೆ, ಇದನ್ನು ಸರಿಪಡಿಸುವುದಕ್ಕೆ ತೀರ್ಮಾನ ತೆಗೆದುಕೊಳ್ಳುತ್ತೇವೆ. ಮತ್ತು ಇನ್ನೊಂದು ವಿಚಾರವನ್ನು ನಾನು ಈಗಾಗಲೇ ಹೇಳಿದ್ದೇನೆ. ಏನೆಂದರೆ ತಮಗೆ ಗೊತ್ತಿರುವಹಾಗೆ ನವೆಂಬರ್ ತಿಂಗಳಲ್ಲಿ ಸುಮಾರು ೫೦ ಸಾವಿರ ಟನ್ ಗಳಷ್ಟು ನಮಗೆ ಅಕ್ಕಿ ಬರುತ್ತಿತ್ತು. ಮೊದಲು ಜನವರಿಯಲ್ಲಿ ೫೦ ಸಾವಿರ ಅಕ್ಕಿ ಬರುತ್ತಿದ್ದುದನ್ನು ೪೦ ಸಾವಿರಕ್ಕೆ ಇಳಿಸಿದರು. ಮತ್ತು ನವೆಂಬರ್‌ನಲ್ಲಿ ೫೦ ಸಾವಿರ ಟನ್‌ಗಳಿಗೆ ಹೆಚ್ಚಿಸಿದರು. ಕೇಂದ್ರದಲ್ಲಿ ಹೊಸ ಸರ್ಕಾರ ಬಂದಮೇಲೆ ಮತ್ತೆ ೪೦ ಸಾವಿರ ಟನ್‌ಗಳಿಗೆ ಇಳಿಸಿದರು. ನಾನು ಕೇಂದ್ರದ ಆಹಾರ ಮಂತ್ರಿಗಳನ್ನು ಭೇಟಿ ಮಾಡಿದ ಮೇಲೆ ೫೦ ಸಾವಿರ ಟನ್‌ಗಳಿಗೆ ಹೆಚ್ಚು ಮಾಡಿದ್ದಾರೆ ಆದರೆ ೭೫ ಸಾವಿರ ಟನ್ ಅಕ್ಕಿ ನಮಗೆ ಬೇಕಾಗಿದೆ. ಅವರ ವಿಚಾರದಲ್ಲಿ ಕಳಿದ ಬಾರಿ ಹೋದಾಗ ಮಾತನಾಡಿ ಬಂದಿದ್ದೇನೆ. ನಾನು ವಿರೋಧಪಕ್ಷದ ಉಪನಾಯಕರಲ್ಲಿ ಕೇಳಿಕೊಳ್ಳುತ್ತಿದ್ದೇನೆ, ನಿಮ್ಮ ವತಿಯಿಂದಲೂ ಒತ್ತಡ ತಂದರೆ ೭೫ ಸಾವಿರ ಟನ್ ಅಕ್ಕಿ ನಮಗೆ ಬಂದರೆ ಆದಷ್ಟು ಹೆಚ್ಚು ಜನರಿಗೆ ಕಾರ್ಡ್‌ಗಳನ್ನು ಕೊಡಬಹುದು. ಗ್ರಾಮಾಂತರ ಪ್ರದೇಶದ ಜನರಿಗೆ ಹೆಚ್ಚು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ತಾವೂ ಕೂಡ ತಮ್ಮ ಪ್ರಭಾವ ಬೀರಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಕಾಳಮರಿಗೌಡ.—ಇವತ್ತು ಈ ಹಸಿರು ಹಾಗೂ ಕೇಸರಿ ಕಾರ್ಡ್‌ಗಳ ಹಂಚಿಕೆಯಲ್ಲಿ ಏನು ಆಧಾರವನ್ನು ನಿಗದಿ ಮಾಡಿದ್ದಾರಿ ? ಗೈಡ್‌ಲೈನ್ಸ್ ಏನು ? ಇವತ್ತು ಈ ಕಾರ್ಡುಗಳ ಹಂಚಿಕೆಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಕನ್‌ಫ್ಯೂಸ್ ಆಗಿದೆ. ಹತ್ತು ಎಕರೆ ಜಮೀನು ಇರುವವರಿಗೂ ಹಸಿರು ಕಾರ್ಡು ಸಿಕ್ಕಿದೆ. ಒಂದೂವರೆ ಎಕರೆ ಜಮೀನು ಇರುವವರಿಗೆ ಕೇಸರಿ ಕಾರ್ಡು ಸಿಕ್ಕಿದೆ. ಆದ್ದರಿಂದ ಇದಕ್ಕೆ ಏನು ಆಧಾರ ಇಟ್ಟುಕೊಂಡಿದ್ದೀರೆಂಬುದನ್ನು ತಾವು ತಿಳಿಸಬೇಕು ?

ಶ್ರೀ ಕೆ.ಜೆ. ಜಾರ್ಜ್.—ಅಧ್ಯಕ್ಷರೇ, ಗ್ರಾಮಾಂತರ ಪ್ರದೇಶದಲ್ಲಿ ಯಾರಿಗೆ ವಾರ್ಷಿಕ ವರಮಾನ ೫,೬೦೦ ರೂ ಗಳಿಗಿಂತಾ ಕಡಿಮೆ ಇರುತ್ತದೋ ಅಂತಹವರಿಗೆ ಹಸಿರು ಕಾರ್ಡನ್ನು ಹಾಗೂ ಹೆಚ್ಚು ವರಮಾನ ಇರುವವರಿಗೆ ಸ್ಯಾಫ್ರಿನ್ ಕಾರ್ಡ್‌ನ್ನು ಕೊಡುವ ವ್ಯವಸ್ಥೆ ಇದೆ.

ಶ್ರೀ ಕೆ.ಎಸ್. ಕಾಳಮರಿಗೌಡ. ಈ ೩,೬೦೦ ರೂಪಾಯಿಗಳ ವಾರ್ಷಿಕ ವರಮಾನವನ್ನು ಯಾವ ಆಧಾರದ ಮೇಲೆ ನಿಗದಿ ಮಾಡುತ್ತೀರಿ ?

(ಉತ್ತರವಿಲ್ಲ)

ಶ್ರೀಮತಿ ದಮಯಂತಿ ಬೋರೇಗೌಡ.—ಇದರಲ್ಲಿ ಇರುವ ಲೋಪದೋಷಗಳನ್ನು ಹೋಗಲಾಡಿಸುವುದಕ್ಕೆ ಸ್ಥಳೀಯ ನಿರ್ಬಂಧಗಳಿಂದ ಕಷ್ಟವಾಗುತ್ತದೆ. ಆದ್ದರಿಂದ ಬೇರೆ ಬದಲಿ ವ್ಯವಸ್ಥೆ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಕೆ.ಜೆ. ಜಾರ್ಜ್.—ಅಧ್ಯಕ್ಷರೇ, ನಾನು ಈಗಾಗಲೇ ಎಲ್ಲ ಸಲಹೆಗಳನ್ನು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ —ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವಹಾಗೆ ಯಾವುದೇ ಹೊಸ ಯೋಜನೆಗಳನ್ನು ತಂದಾಗ ಅಲ್ಲಿ ಇಲ್ಲಿ ಒಂದೆರಡು ಪರ್ಸೆಂಟ್ ಲೋಪದೋಷಗಳಾಗುವುದು ಸರ್ವೇ ಸಾಮಾನ್ಯ. ಏಆರ್‌ಡಿಪಿ ಆಗಲೀ, ವೈದ್ಯಾಪ್ಯವೇತನವಾಗಲೀ, ವಿಧವಾ ವೇತನವಾಗಲೀ ಒಂದಿಬ್ಬರು ಅರ್ಹರಲ್ಲದವರಿಗೂ ಸಿಕ್ಕಿರಬಹುದು. ಇದನ್ನು ಪತ್ತೆಹಚ್ಚಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಇದನ್ನೇ ನೆಪಮಾಡಿಕೊಂಡು ಯಾರು ನಿಜವಾಗಿ ಹಸಿರು ಕಾರ್ಡ್‌ಗೆ ಅರ್ಹರೂ ಇದ್ದಾರೆ ಅಂತಹವರಿಗೆ ಕಾರ್ಡ್ ಸಿಗುವ ಬಗ್ಗೆ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ, ಜಿಲ್ಲಾ ಪರಿಷತ್ತಿಗೆ ಆದೇಶ ಕೊಟ್ಟು ಅವರಿಗೆ ತಕ್ಷಣ ಹಸಿರು ಕಾರ್ಡ್ ಸಿಗುವಹಾಗೆ ಕಾರ್ಯಕ್ರಮ ಹಾಕಿಕೊಳ್ಳಬೇಕು. ನನಗೆ ತಿಳಿದ ಪ್ರಕಾರ ತಮ್ಮ ಕ್ಷೇತ್ರದಲ್ಲಿನ ಪಟ್ಟಣ ಪ್ರದೇಶದಲ್ಲಿ ಹೊಸದಾಗಿ ಕಾರ್ಡ್ ಕೊಡುವುದಕ್ಕೆ ಅಲ್ಲಿರುವಂತಹ ರೆವಿನ್ಯೂ ಇನ್ಸ್‌ಪೆಕ್ಟರ್ಸ್ ಮನೆ ಮನೆಗೆ ಹೋಗಿ ಫಾರ್ಮ್ಸ್ ಕೊಡುವ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಸರ್ಕಾರದಿಂದ ಈ ಬಗ್ಗೆ ಪ್ರಕಟಣೆ ಆಗಿದೆಯೇ ? ಈ ಕಾರ್ಯಕ್ರಮ ಬರೀ ನಿಮ್ಮ ಕ್ಷೇತ್ರದಲ್ಲಿ ಬರುವ ಎಲ್ಲಾ ಪಟ್ಟಣ ಪ್ರದೇಶಗಳಿಗೆ ಮಾತ್ರವೋ ಅಥವಾ ರಾಜ್ಯದಲ್ಲಿ ಬರುವ ಎಲ್ಲಾ ಪಟ್ಟಣ ಪ್ರದೇಶಕ್ಕೂ ಇದು ಅನ್ವಯವಾಗುತ್ತದೋ ಎಂಬ ಬಗ್ಗೆ ಸ್ಪಷ್ಟೀಕರಣ ನೀಡಬೇಕು ?

ಶ್ರೀ ಕೆ.ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದಹಾಗೆ ನಮ್ಮ ರಾಜ್ಯದಲ್ಲಿ ೬೯ ಲಕ್ಷದಾ ೫೦ ಸಾವಿರದಷ್ಟು ಜನರು ಬಡತನದ ರೇಖೆಯಿಂದ ಕೆಳಗಿರುವ ಜನರು ಇದ್ದಾರೆ. ನಾವು ೫೪ ಪರ್ಸೆಂಟ್ ನಷ್ಟು ಜನರಿಗೆ ನಾವು ಹಸಿರು ಕಾರ್ಡನ್ನು ಹಂಚಿದ್ದೇವೆ ಮತ್ತು ಇದರಲ್ಲಿ ಕೆಲವು ಅರ್ಹರಿಗೆ ಸಿಗದೇ ಅನರ್ಹರಿಗೆ ಕಾರ್ಡ್ ಸಿಕ್ಕಿದೆ ಎಂದು ಗೊತ್ತಾಗಿದೆ. ನಾವು ಒಂದು ವರ್ಷಕ್ಕೆ ಸುಮಾರು ೪೨ ಕೋಟಿ ರೂಪಾಯಿಗಳನ್ನು ಗ್ರೀನ್ ಕಾರ್ಡ್‌ಗಳಿಗೋಸ್ಕರ ಸಬ್ಸಿಡಿ ಕೊಡಬೇಕಾಗುತ್ತದೆ. ಆದ್ದರಿಂದ ಇವತ್ತು ಅನರ್ಹರಿಗೆ ಯಾರಿಗೆ ಸಿಕ್ಕಿದೆ ಎಂಬುದನ್ನು ಪತ್ತೆ ಹಚ್ಚಿದ್ದಿದ್ದರೆ ನಾವು ಸಬ್ಸಿಡಿ ಹಣವನ್ನೂ ಜಾಸ್ತಿ ಕೊಡಬೇಕಾಗುತ್ತದೆ. ಈ ಕಾರಣದಿಂದ ಇವತ್ತು ಅನರ್ಹರಿಗೆ ಸಿಕ್ಕಿದ ಕಾರ್ಡುಗಳನ್ನು ಪತ್ತೆ ಹಚ್ಚಿ ಅರ್ಹರಿಗೆ ಕೊಡುವ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಅರ್ಹರಿಗೆ ಹಸಿರು ಕಾರ್ಡ್ ಕೊಡಲೇಬೇಕೆಂದು ಹಲವಾರು ಸದಸ್ಯರು ಸಲಹೆ ಮಾಡಿದ್ದಾರೆ. ಆ ಸಲಹೆಗಳನ್ನು ತೀವ್ರವಾಗಿ ಪರಿಶೀಲನೆ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ಈಗ ಬೆಂಗಳೂರಿನಲ್ಲಿ ಕೊಡುತ್ತಿದ್ದಾರಲ್ಲಾ ?

ಶ್ರೀ ಕೆ.ಜೆ. ಜಾರ್ಜ್.—ಬೆಂಗಳೂರಿನಲ್ಲಾಗಲೀ ಅಥವಾ ಗ್ರಾಮಾಂತರ ಪ್ರದೇಶದಲ್ಲಿ ಆಗಲೀ ನಾವು ಕಾರ್ಡ್ ಕೊಡುವುದನ್ನು ಸ್ಟಾಪ್ ಮಾಡಿಲ್ಲ. ತನಿಖೆಯ ನಂತರ ಯಾರು ಅರ್ಹರು ಎಂದು ಕಂಡು ಬರುತ್ತಾರೆ ಅವರಿಗೆ ಕೊಡುವ ವ್ಯವಸ್ಥೆ ಇದೆ.

ಡಾ. ಹೆಚ್.ಡಿ. ಲಮಾಣಿ.—ಹಿಂದೆ ಹಸಿರು ಕಾರ್ಡ್ ಕೊಡುವ ವ್ಯವಸ್ಥೆ ಮಾಡಿದ್ದು ಕಂದಾಯ ಇಲಾಖೆಯವರು. ಆ ನಂತರ ಅನರ್ಹರಿಗೆ ಹೆಚ್ಚು ಹಸಿರು ಕಾರ್ಡ್ ಹೋಗಿವೆ ಎಂದು ತಿಳಿದಮೇಲೆ ಜಿಲ್ಲಾ ಪರಿಷತ್ತಿನವರು ಮಂಡಲ ಪಂಚಾಯತಿಗಳಿಗೆ ಒಂದು ಆದೇಶ ಕೊಟ್ಟು ಮಂಡಲಪ್ರಧಾನರು ಇದನ್ನು ಪತ್ತೆ ಹಚ್ಚಬೇಕೆಂದು ಸೂಚಿಸಿದರು, ಆದರೆ ಅವರು ಪತ್ತೆ ಮಾಡಲು ಹೋಗಲಿಲ್ಲ. ಏಕೆಂದರೆ ಎಲ್ಲ ಕಡೆ ಪಾರ್ಟಿಸ್ಪಿಮ್ ಇದೆ. ಆದ್ದರಿಂದ ಇದರ ಬಗ್ಗೆ ನಾವು ಏನು ಸಜೆಕ್ಷನ್ ಕೊಟ್ಟೆವು ಎಂದರೆ, ಯಾರು ಈ ಹಸಿರು ಕಾರ್ಡ್‌ಗಳನ್ನು ತಪ್ಪು ಜನರಿಗೆ ಕೊಟ್ಟಿದ್ದಾರೋ ಅವರೇ ಅದನ್ನು ಪರಿಶೀಲನೆಮಾಡಿ ಅಂತಹ ಪರನ್ನು ಪತ್ತೆ ಹಚ್ಚಿ ಅವರೇ ಕ್ಯಾನ್ಸಲ್ ಮಾಡಲಿ ಎಂದು ಹೇಳಿದೆವು, ಇವತ್ತು ಪ್ರಧಾನರು ಅವನ್ನು ಪತ್ತೆ ಹಚ್ಚುವುದಕ್ಕೆ ಸಂತೋಷವಾಗಿ ಹೋಗುವುದಿಲ್ಲ, ಏಕೆಂದರೆ ಅವರು ಯಾರನ್ನೂ ವಿರೋಧ ಕಟ್ಟಿಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಆದ್ದರಿಂದ ಯಾರು ಕೊಟ್ಟಿದ್ದಾರೋ ಅವರೇ ಪತ್ತೆಹಚ್ಚಿ ಕ್ಯಾನ್ಸಲ್ ಮಾಡಬೇಕೆಂದು ಹೇಳುತ್ತೇನೆ. ಇದಕ್ಕೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ?

ಶ್ರೀ ಕೆ.ಜೆ. ಜಾರ್ಜ್.—ಅವರು ತಮ್ಮ ಪ್ರಶ್ನೆಯನ್ನು ಮತ್ತೊಮ್ಮೆ ಹೇಳಲಿ.

ಡಾ. ಹೆಚ್.ಡಿ. ಲವಾಣಿ.—ಮಂಡಲ ಪ್ರಧಾನರಿಗೆ ಪತ್ರ ಹಚ್ಚಿಯೆಂದು ಆದೇಶ ಕೊಡುತ್ತಿದ್ದಾರೆ ಅವರು ಮತ್ತೆ ಚುನಾವಣೆಗೆ ಹೋಗಬೇಕು. ಅವರಿಗೆ ಬೇರೆ ಬೇರೆ ರಾಜಕೀಯ ಪ್ರಭಾವಗಳು ಬರುತ್ತವೆ ಆದ್ದರಿಂದ ಅವರು ರದ್ದು ಮಾಡುವುದಕ್ಕಾಗುವುದಿಲ್ಲ. ಸಧ್ಯದಲ್ಲಿ ಇದಕ್ಕೆ ಬೇರೆ ದಾರಿಯನ್ನು ಹುಡುಕ ಬೇಕಾಗುತ್ತದೆ. ಈ ಹಸಿರು ಕಾರ್ಡ್‌ಗಳನ್ನು ರವಿನೂ ಡಿಪಾರ್ಟ್‌ಮೆಂಟ್‌ನವರು ಕೊಟ್ಟಿದ್ದಾರೆ. ಆದ್ದರಿಂದ ಅವರೇ ಕ್ಯಾನ್ಸಲ್ ಮಾಡಬೇಕಾಗುತ್ತದೆ. ಈ ರೀತಿಯಲ್ಲಿ ಏನಾದರು ಕಾರ್ಯಕ್ರಮವನ್ನು ಹಾಕಿಕೊಳ್ಳಲಿಕ್ಕೆ ಸಾಧ್ಯವಿದೆಯೆ ?

ಶ್ರೀ ಕೆ.ಜೆ. ಜಾರ್ಜ್.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡಿ ಕ್ರಮ ತೆಗೆದು ಕೊಳ್ಳುತ್ತೇನೆ.

ಶ್ರೀ ಡಿ.ಎ. ಚಿನ್ನಪ್ಪ.—ಕಾರ್ಡ್‌ಗಳನ್ನು ಕೊಡುವಾಗ ಈ ಹಿಂದೆ ಶಿಫಾರಸ್ಸಿನಿಂದ ಯಾರ್ಯಾರಿಗೊ ಕೊಟ್ಟಿದ್ದಾರೆ. ಕಾರ್ಡ್‌ಗಳನ್ನು ವಿತರಣೆ ಮಾಡುವಂತಹ ಕೆಲಸವನ್ನು ಯಾರಾದರೂ ಅಧಿಕಾರಿಗಳಿಗೆ ವಹಿಸಬೇಕು ಅಧಿಕಾರಿಗಳು ಕೊಡುವ ವ್ಯವಸ್ಥೆ ಮಾಡಿದರೆ ತಹಶೀಲ್ದಾರ್ ಅಥವಾ ಬ್ಲಾಕ್ ಡೆವಲಪ್ ಮೆಂಟ್ ಆಫೀಸರ್‌ಗಳಿಗೆ ವಹಿಸಿ. ೨ ಎಕರೆ ೫ ಎಕರೆ ೫ ಎಕರೆ ತೋಟ ಗದ್ದೆ ಇರುವವರಿಗೆ ಕಾರ್ಡ್‌ಗಳನ್ನು ಕೊಟ್ಟಿದ್ದು ಉಂಟು. ಕಾರ್ಡ್‌ಗಳನ್ನು ವಾಪಸ್ಸು ತೆಗೆದುಕೊಂಡು ಪುನಃ ವಾಪಸ್ಸು ಅವರಿಗೆ ಕೊಟ್ಟಿದ್ದಾರೆ. ಇದನ್ನು ತಪ್ಪಿಸಲಿಕ್ಕೆ ಬಿ.ಡಿ.ಒ. ಅಥವಾ ತಹಶೀಲ್ದಾರ್‌ಗಳಿಗೆ ಅಧಿಕಾರವನ್ನು ಕೊಟ್ಟರೆ ಸಮಸ್ಯೆ ಪರಿಹಾರ ಆಗುತ್ತದೆ.

ಶ್ರೀ ಕೆ.ಜೆ. ಜಾರ್ಜ್.—ನಾನು ಈಗಾಗಲೇ ಇದಕ್ಕೆ ಉತ್ತರ ಕೊಟ್ಟಿದ್ದೇನೆ.

ಆಹಾರ ಧಾನ್ಯಗಳ ಸಾಗಾಣಿಕೆ ನಿರ್ಬಂಧದ ಬಗ್ಗೆ

ಶಿರಿಶಿ. ಪ್ರೊ. ಎಂ. ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ).—ಮಾನ್ಯ ಆಹಾರ ಮತ್ತು ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾನ್ಯ ಸಾಗಾಣಿಕೆ ನಿರ್ಬಂಧದಿಂದ ಸರ್ಕಾರಕ್ಕೆ ಇರುವ ಅನುಕೂಲಗಳೇನು ?

ಆ) ಈ ನಿರ್ಬಂಧದಿಂದ ಸರ್ಕಾರಕ್ಕೆ ಪ್ರಯೋಜನವಾಗಿದೆಯೇ ?

ಶ್ರೀ ಕೆ.ಜೆ. ಜಾರ್ಜ್ (ಆಹಾರ ಮತ್ತು ಸಾರಿಗೆ ರಾಜ್ಯ ಸಚಿವರು).—

ಅ) ರಾಜ್ಯದೊಳಗೆ ಭತ್ತ ಸಾಗಾಣಿಕೆಗೆ ಯಾವುದೇ ನಿರ್ಬಂಧವಿರುವುದಿಲ್ಲ. ಆದರೆ, ಕರ್ನಾಟಕ ಅಕ್ಕಿ ಸಂಗ್ರಹಣೆ (ಲೆವಿ) ಆದೇಶ ೧೯೭೪ರ ಪ್ರಕಾರ ಭತ್ತದ ಅಂತರ ರಾಜ್ಯ ಸಾಗಾಣಿಕೆ ನಿರ್ಬಂಧವಿರುತ್ತದೆ ಲೆವಿ ಆದೇಶದ ಪ್ರಕಾರ ಮಿಲ್ಲರ್ಸ್ : ವ್ಯಾಪಾರಿಗಾರರು ಶೇ. ೩೩ ೧/೩ ರಷ್ಟು ಅಕ್ಕಿಯನ್ನು ಕೇಂದ್ರ ಸರ್ಕಾರ ನಿಗದಿಪಡಿಸಿರುವ ಗುಣಮಟ್ಟದಲ್ಲಿ ಲೆವಿಯಾಗಿ ನೀಡಿ ಉಳಿಕೆ ಶೇ. ೬೬ ೨/೩ ರಷ್ಟು ಅಕ್ಕಿಯನ್ನು ಜಿಲ್ಲಾಧಿಕಾರಿಗಳಿಂದ ಲೀಸ್ ಸರ್ಟಿಫಿಕೇಟನ್ನು ಹಾಗೂ ತಹಶೀಲ್ದಾರರಿಂದ ಸಾಗಾಣಿಕೆ ಪತ್ರವನ್ನು ಪಡೆದು ಯಾವುದೇ ಸ್ಥಳಕ್ಕೆ ಬೇಕಾದರೂ ಸಾಗಾಣಿಕೆ ಮಾಡಬಹುದಾಗಿದೆ. ಇದರಿಂದ ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಲೆವಿ ಅಕ್ಕಿ ಸಂಗ್ರಹಣೆಗೆ ಉಪಯೋಗವಾಗುತ್ತದೆ. ಈ ಅಕ್ಕಿಯನ್ನು ಭಾರತ ಆಹಾರ ನಿಗಮವು ರಾಜ್ಯದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ ವಿತರಣೆಗೆ ಹಂಚಿಕೆ ಮಾಡುತ್ತದೆ.

ಆ) ಹೌದು.

ಪ್ರೊ :ಎಂ. ಡಿ. ನಂಜುಂಡಸ್ವಾಮಿ.— Karnataka Rise Procurement (Levy) Order, 1984 ರ ಅದರ ಪ್ರಕಾರ ಅಂತರರಾಜ್ಯ ಸಾಗಾಣಿಕೆ ನಿರ್ಬಂಧವನ್ನು ಭತ್ತಕ್ಕೆ ಹಾಕಿದ್ದೀವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಹೋದವರ್ಷ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರವಿದ್ದಾಗ, ಭತ್ತಕ್ಕೆ ಅಂತರರಾಜ್ಯ ನಿರ್ಬಂಧವನ್ನು ರದ್ದು ಮಾಡಿತ್ತು ಎನ್ನುವ ವಿಚಾರವನ್ನು ಸಚಿವರ ಗಮನಕ್ಕೆ ತರುತಾ ಅದನ್ನು ವಿತಕ್ಕೆ ರದ್ದು ಮಾಡಿತ್ತು ಎನ್ನುವುದಕ್ಕೆ ಕಾರಣ ಹೇಳಬೇಕಾಗಿದೆ. ನಮ್ಮ ಸಂವಿಧಾನದ ಆರ್ಟಿಕಲ್ ೩೧೧ರ ಪ್ರಕಾರ ವ್ಯಕ್ತಿ ಸ್ವಾತಂತ್ರ್ಯ ಈ ದೇಶದ ಎಲ್ಲಾ ಪ್ರಜೆಗಳಿಗೂ ಇರುವ ರೀತಿಯಲ್ಲಿ ರೈತರಿಗೂ ಇದೆ ಎನ್ನುವುದನ್ನು ರಾಜೀವ್‌ಗಾಂಧಿಯವರಿಗೆ ನಾವು ಮನದಟ್ಟು ಮಾಡಿಕೊಟ್ಟ ಮೇಲೆ ನಂತರರಾಜ್ಯ ಸಾಗಾಣಿಕೆ ನಿರ್ಬಂಧವನ್ನು ರದ್ದು ಮಾಡಲಾಗಿದೆ ಆದರೂ ನಿಮ್ಮ ಸರ್ಕಾರ ವಿತ್ತಕ್ಕೆ ಮುಂದುವರಿಸುತ್ತಿದೆ? ಎರಡನೆಯದಾಗಿ ಇದರಿಂದ ಎನು ಪ್ರಯೋಜನವಿದೆ ಎನ್ನುವ ಬಗ್ಗೆ ಸಚಿವರು ಏನು ಉತ್ತರ ಕೊಟ್ಟಿದ್ದಾರೆಂದರೆ,೩೩ ೧/೩ರಷ್ಟು ಅಕ್ಕಿ(ಲೆವಿ)ಸಂಗ್ರಹಣೆ ಮಾಡಲಿಕ್ಕೆ ಈ ಕಾರ್ಯಕ್ರಮ ಸಹಾಯವಾಗುತ್ತಿದೆ ಎಂದು ಹೇಳಿದ್ದಾರೆ. ಅದು ಒಂದು ಅನುಕೂಲ. ನೀವು ರೈಸ್‌ಮಿಲ್ ಮಾಲೀಕರಿಂದ